**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ :ಕೇಂದ್ರ ಕಛೇರಿ : ಬೆಂಗಳೂರು**

**ಪತ್ರಿಕಾ ಪ್ರಕಟಣೆ**

**ವಿಷಯ: ರಾಷ್ಟ್ರೀಯ ಮಟ್ಟದ ಅತ್ಯುತ್ತಮ ರಸ್ತೆ ಸಾರಿಗೆ ನಿಗಮ –ಕೆಎಸ್‌ಆರ್‌ಟಿಸಿಗೆ ಅತ್ಯುತ್ತಮ ಇಂಧನ ಕ್ಷಮತೆಗಾಗಿ ರೂ.5,00,000/– ನಗದು ಬಹುಮಾನ ಮತ್ತು ಪ್ರಶಸ್ತಿ ಪ್ರದಾನ.**

*******

**ದಿನಾಂಕ: 11ನೇ ಏಪ್ರಿಲ್,2022, ನವದೆಹಲಿ:** ಭಾರತ ಸರ್ಕಾರದ, ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದಡಿಯಲ್ಲಿ ಕರ್ತವ್ಯ ನಿರ್ವಹಿಸುವ ಸಂಸ್ಥೆಯಾದ, ಪೆಟ್ರೋಲಿಯಂ ಸಂರಕ್ಷಣಾ ಸಂಶೋಧನಾ ಸಂಸ್ಥೆಯು ಪ್ರತಿ ವರ್ಷ ದೇಶದಾದ್ಯಂತ ಸಾರ್ವಜನಿಕ ವಲಯದ ಸಂಸ್ಥೆಗಳಲ್ಲಿ ಇಂಧನ ಕ್ಷಮತಾ ಮಹೋತ್ಸವ 'ಸಕ್ಷಮ್ –2022'ಕಾರ್ಯಕ್ರಮವನ್ನು ಏರ್ಪಡಿಸಿರುತ್ತದೆ. ಸಂಸ್ಥೆಗಳ ಇಂಧನ ಕ್ಷಮತೆಯ ಸಾಧನೆಯು ಏಪ್ರಿಲ್–2020 ರಿಂದ ಮಾರ್ಚ್–2021ರನ್ನು ಪರಿಗಣಿಸಿದ್ದು, ಕೆಎಸ್‌ಆರ್‌ಟಿಸಿಯ ಇಂಧನ ಕ್ಷಮತೆಯ ಸಾಧನೆಗಾಗಿ ರೂ.5,00,000/–ನಗದು ಪುರಸ್ಕಾರ ಮತ್ತು ಪ್ರಶಸ್ತಿ ಲಭಿಸಿರುತ್ತದೆ.

ಇಂದು ಇಂಡಿಯಾ ಹ್ಯಾಬಿಟೇಟ್ ಸೆಂಟರ್, ನವದೆಹಲಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾರತ ಸರ್ಕಾರದ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲಗಳ ಸಚಿವಾಲಯದ ಕಾರ್ಯದರ್ಶಿಗಳಾದ ಶ್ರೀ ಪಂಕಜ್ ಜೈನ್, ಭಾಆಸೇ,ರವರು ಶ್ರೀ.ಶಿವಯೋಗಿ ಸಿ. ಕಳಸದ, ಭಾಆಸೇ, ವ್ಯವಸ್ಥಾಪಕ ನಿರ್ದೇಶಕರು, ಕೆಎಸ್‌ಆರ್‌ಟಿಸಿರವರಿಗೆ ಪ್ರಶಸ್ತಿ ಪ್ರದಾನ ಮಾಡಿದರು.

ಈ ಸಂದರ್ಭದಲ್ಲಿ ಶ್ರೀ ಎಂ ರಮೇಶ್, ಮುಖ್ಯ ಯಾಂತ್ರಿಕ ಅಭಿಯಂತರರು, ಕರಾರಸಾನಿಗಮ, ಅಧ್ಯಕ್ಷರು IOCL, CMD-HPCL, CMD-BPCL, CMD-ONGC C&MD- GAIL ಮತ್ತು C&MD-OIL ರವರುಗಳು ಉಪಸ್ಥಿತರಿದ್ದರು.

ಶ್ರೀ.ಶಿವಯೋಗಿ ಸಿ. ಕಳಸದ, ಭಾಆಸೇ, ವ್ಯವಸ್ಥಾಪಕ ನಿರ್ದೇಶಕರು, ಕೆಎಸ್‌ಆರ್‌ಟಿಸಿರವರು ಮಾತನಾಡಿ, ಸದರಿ ಪ್ರಶಸ್ತಿಯು ನಿಗಮದ ಪ್ರತಿಯೊಬ್ಬ ಸಿಬ್ಬಂದಿಯ ಪರಿಶ್ರಮ ಮತ್ತು ದಕ್ಷತೆಯ ಫಲವಾಗಿದ್ದು, ಈ ಪ್ರಶಸ್ತಿಯು ನಮ್ಮ ಸಿಬ್ಬಂದಿಗಳಿಗೆ ಸಮರ್ಪಿತವಾಗಿದೆಯೆಂದು ತಿಳಿಸಿದರು.

ಸಹಿ/–

ಮಂಡಳಿ ಕಾರ್ಯದರ್ಶಿ/
ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ